## ನಿರೀಕ್ಷೆಗಳ 'ಟೋನಿ'

'ಬಾಲ್‌ಪೆನ್' ಚಿತ್ರದ ಗುಂಗಿನಲ್ಲೇ ಸಾಕಷ್ಟು ದಿನ ಸುದ್ದಿಯಲ್ಲಿದ್ದ ಶ್ರೀನಗರ ಕಿಟ್ಟಿ ಗಮನ ಈಗ 'ಟೋನಿ' ಪ್ರಚಾರದ ಕಡೆಗೆ ಹೊರಳಿದೆ. ಈ ಚಿತ್ರ ಹಲವು ಕಾರಣಗಳಿಂದ ನಿರೀಕ್ಷೆ ಹುಟ್ಟುಹಾಕಿದೆ. ಒಂದು– 'ಒಲವೇ ಮಂದಾರ' ಎಂಬ ಅಚ್ಚುಕಟ್ಟಾದ ಚಿತ್ರ ನಿರ್ದೇಶಿಸಿದ್ದ ಜಯತೀರ್ಥ ಈ ಚಿತ್ರಕ್ಕೆ ಆ್ಯಕ್ಷನ್, ಕಟ್ ಹೇಳಿರುವುದು. ಎರಡು– ಚಿತ್ರದ ಗೀತೆಗಳ ಹಾಡುಗಾರರ ದಂಡಿನಲ್ಲಿ ಪುನೀತ್ ರಾಜ್ ಕುಮಾರ್, ಹರಿಕೃಷ್ಣ, ರಘು ದೀಕ್ಷಿತ್, ಸೋನು ನಿಗಮ್ ಇರುವುದು. ಮೂರು– ಚಿತ್ರಕ್ಕೆ 'ಏಕ್ ದಿನ್ ಕಾ ಸುಲ್ತಾನ್' ಎಂಬ ಟ್ಯಾಗ್‌ಲೈನ್ ಇರುವುದು.



ಶ್ರೀನಗರ ಕಿಟ್ಟಿ



ಜಯತೀರ್ಥ

ಬೀದಿ ನಾಟಕಗಳ ಹಿನ್ನೆಲೆಯ ಜಯತೀರ್ಥ 'ಒಲವೇ ಮಂದಾರ' ಮಾಡಿದ ನಂತರ ಸ್ಕ್ರಿಪ್ಟ್ ಹಿಡಿದುಕೊಂಡು ಅನೇಕರಿಗೆ ಕತೆ ಹೇಳಿದ್ದರು. ಆಮೇಲೆ ಗಳಿಗೆ ಕೂಡಿಬಂದು, ಟೋನಿ ಸಿದ್ಧವಾಗಿದೆ. ಜೂನ್‌ನಲ್ಲಿ ತೆರೆ ಕಾಣಲಿರುವ ಈ ಚಿತ್ರ ಶ್ರೀನಗರ ಕಿಟ್ಟಿಗೆ ನಟನಾಗಿ ಅಗತ್ಯವಿರುವ ಬ್ರೇಕ್ ನೀಡೀತೆ ಎಂಬ ಕುತೂಹಲ ಇದೆ.

ಚಿತ್ರದ ಆಡಿಯೊ ಇದೀಗ ಮಾರುಕಟ್ಟೆಯಲ್ಲಿದ್ದು, ಸಾಧುಕೋಕಿಲ ಮಟ್ಟುಗಳನ್ನು ಹಾಕಿದ್ದಾರೆ. ಒಂದು ಹಾಡಿನಲ್ಲಿ ರಘು ದೀಕ್ಷಿತ್ ಕಾಣಿಸಿಕೊಂಡಿರುವುದು ವಿಶೇಷ. ಪಲ್ಲವಿ ಹಾಗೂ ಹೇಮಂತ್ ಕೆಲವು ಜನಪದ ಗೀತೆಗಳ ತುಣುಕುಗಳನ್ನು ಹಾಡಿದ್ದು, ಅವೂ ಚಿತ್ರದಲ್ಲಿ ಬಳಕೆಯಾಗಿವೆಯಂತೆ. ಸ್ಟಾರ್ ಗಾಯಕರನ್ನು ಕಲೆ ಹಾಕಿರುವುದರಿಂದ ಜನರಿಗೆ ಹಾಡುಗಳು ಇಷ್ಟವಾಗಲಿವೆ ಎಂಬುದು ಕಿಟ್ಟಿ ಲೆಕ್ಕಾಚಾರ.

## ತಲೆಮಾರುಗಳ 'ಬ್ರಹ್ಮ'

'ಚಾರ್‌ಮಿನಾರ್' ಚಿತ್ರ ಯಶಸ್ವಿಯಾದದ್ದೇ ತಡ ನಿರ್ದೇಶಕ ಆರ್.ಚಂದ್ರು ತಮ್ಮ ಚೊಚ್ಚಲ ನಿರ್ಮಾಣದ ಚಿತ್ರ ಗೆದ್ದಿತೆಂದು ಬೀಗುತ್ತಾ, ದೊಡ್ಡ ಜಾಹೀರಾತನ್ನೂ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದರು. ಆ ಚಿತ್ರ ನೂರು ದಿನದ ಗಡಿ ಮುಟ್ಟಿದ್ದೇ ಅವರ ಎಂದಿನ ಮುಗುಳ್ನಗು ತುಟಿ ಮೇಲೆ ಮೂಡಿದೆ. ಈ ಸಲ ಅವರು ಉಪೇಂದ್ರ ಎಂಬ ದೊಡ್ಡ ಮೀನಿಗೇ ಗಾಳ ಹಾಕಿದ್ದಾರೆ. ನಾಲ್ಕು ತಲೆಮಾರುಗಳ ಪಾತ್ರಗಳು ಬಂದು ಹೋಗುವ ದೊಡ್ಡ ಕ್ಯಾನ್ವಾಸ್‌ನ ಕತೆಯನ್ನು ಅವರು ಸಿನಿಮಾ ಆಗಿಸಲು ಹೊರಟಿದ್ದು, ಅದಕ್ಕೆ 'ಬ್ರಹ್ಮ' ಎಂಬ ಹೆಸರನ್ನಿಟ್ಟಿದ್ದಾರೆ. ಕನ್ನಡ, ತೆಲುಗು ಎರಡೂ ಭಾಷೆಗಳಲ್ಲಿ ಏಕಕಾಲದಲ್ಲಿ ಚಿತ್ರಿತವಾಗಲಿರುವ ಈ ಸಿನಿಮಾ ಚಂದ್ರು ಮಟ್ಟಿಗೆ ವಹಿವಾಟಿನ ಹೈಜಂಪ್ ಎಂದು ಗಾಂಧಿನಗರದವರು ಮಾತನಾಡಿಕೊಳ್ಳುತ್ತಿದ್ದಾರೆ.



ಆರ್.ಚಂದ್ರು

ತಲೆಮಾರುಗಳ ಕತೆ ಎಂದೊಡನೆ 'ಮಗಧೀರ' ತೆಲುಗು ಚಿತ್ರ ನೆನಪಿಗೆ ಬರುವುದು ಸಹಜ. ಆದರೆ ತಮ್ಮ 'ಬ್ರಹ್ಮ'ನಿಗೂ 'ಮಗಧೀರ'ನಿಗೂ ಎಳ್ಳಷ್ಟೂ ಸಂಬಂಧವಿಲ್ಲ ಎಂದು ಚಂದ್ರು ಸ್ಪಷ್ಟನೆ ಕೊಟ್ಟಿದ್ದಾರೆ. ಮುಹೂರ್ತದ ದಿನ ಉಪೇಂದ್ರ 16ನೇ ಶತಮಾನದ ಪಾತ್ರಧಾರಿಯ ಗೆಟಪ್ಪಿನಲ್ಲಿ ಹೈವೋಲ್ಟೇಜ್ ನಗು ಉಕ್ಕಿಸುತ್ತಿದ್ದರು.

ಉಪೇಂದ್ರ ಈ ಚಿತ್ರದ ನಿರ್ದೇಶನದ ವಿಷಯದಲ್ಲಿ ಮೂಗು ತೂರಿಸುವುದಿಲ್ಲ ಎಂಬ ಸೂಚನೆಯನ್ನೂ ಕೊಟ್ಟರು. ಸಂಗೀತ ನಿರ್ದೇಶಕ ಗುರುಕಿರಣ್ 'ಆಪ್ತಮಿತ್ರ' ನಂತರ ತಮಗೆ ಸಿಕ್ಕಿರುವ ದೊಡ್ಡ ಕಮರ್ಷಿಯಲ್ ಪ್ರಾಜೆಕ್ಟ್ ಇದು ಎಂದು ಬೀಗಿದರೆ, ಚಂದ್ರುಗೆ ಇನ್ನೊಂದು ಹಿಟ್ ಕೊಡುವ ಆತ್ಮವಿಶ್ವಾಸ.



ಉಪೇಂದ್ರ

■ ವಿಶಾಖ